ಮಾಡದಿದ್ದರೆ, ನೀರಿನ ಹಾಹಾಕಾರವಿದ್ದರೂ ಸರ್ಕಾರ ಕ್ರಮತೆಗೆದುಕೊಳ್ಳುದಿರುವುದನ್ನು ಪ್ರತಿಭಟಿಸಿ ನಾವೂ ಸಭಾತ್ಯಾಗ ಮಾಡುತ್ತಿದ್ದೇವೆ.

(ಬಿ.ಜೆ.ಪಿ.ಶಾಸಕರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್‌ನಾಗರಾಜ್ (ಚಾಮರಾಜನಗರ): ನಮಗೆ ಅವರ ಮೇಲೆ ವೈಯಕ್ತಿಕವಾಗಿ ದ್ವೇಷವೇನಿಲ್ಲ. ವಸ್ತು ಸ್ಥಿತಿ ಸರಿಯಾಗಿಲ್ಲ, ಕುಡಿಯುವ ನೀರಿನ ಕಥೆ ಕಣ್ಣೀರಿನ ಕಥೆಯಾಗಿದೆ. ಸರ್ಕಾರದ ಈ ಧೋರಣೆಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇವೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಕೆ.ಎಸ್.ಪುಟ್ಟಣಯ್ಯ (ಪಾಂಡವಪುರ): ಮಾನ್ಯ ಉಪಾಧ್ಯಕ್ಷರೆ, ಕುಡಿಯುವ ನೀರಿನ ಸಮಸ್ಯೆಯ ನಿರ್ಮೂಲನೆಗಾಗಿ ಇಷ್ಟೊಂದು ಹಣವನ್ನು ಖರ್ಚು ಮಾಡಿ ಸಮರೋಪಾದಿಯಲ್ಲಿ ಕೆಲಸ ಮಾಡುತ್ತಿದ್ದೇವೆಂದು ತಾವು ಹೇಳುತ್ತೀರಿ. ಆದರೆ ನಮ್ಮ ಮಂಡ್ಯ ಜಿಲ್ಲೆಯಲ್ಲಿ

ಉಪಾಧ್ಯಕ್ಷರು: ತಾವು ಮತ್ತೆ ಅದನ್ನೇ ಹೇಳುತ್ತೀರಲ್ಲಾ. ಈಗ ನಿಲುವಳಿ ಸೂಚನೆಯನ್ನು ನಿರಕಾರಿಸಲಾಗಿದೆ, ತಾವು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಕೆ.ಎಸ್.ಪುಟ್ಟಣಯ್ಯ: ನಮ್ಮ ಜಿಲ್ಲೆಯಲ್ಲಿ ಮಿನಿವಾಟರ್ ಸಪ್ಲೈಯಲ್ಲಿ 104 ಓವರ್ ಹೆಡ್ ಟ್ಯಾಂಕ್‌ಗಳ ಕೆಲಸ ಮುಗಿದು ಆರು ತಿಂಗಳುಗಳಾಗಿದೆ. ಆದರೆ ಕೆ.ಇ.ಬಿ.ನವರು ಅದಕ್ಕೆ ವಿದ್ಯುತ್ ಸಂಪರ್ಕ ಕೊಟ್ಟಿಲ್ಲ. ಇಲ್ಲಿ ಕೆ.ಇ.ಬಿ.ನವರು ಮತ್ತು ಜಿಲ್ಲಾಪರಿಷತ್‌ನವರು ಜಂಟಿಯಾಗಿ ಕೆಲಸ ಮಾಡಬೇಕಾಗುತ್ತದೆ. ಇಲ್ಲಿ ಆಡಳಿತಾತ್ಮಕವಾದ ಅನಾನುಕೂಲತೆಗಳಿಂದಾಗಿ ಕುಡಿಯುವ ನೀರಿನ ಸಮಸ್ಯೆ ಜಾಸ್ತಿಯಾಗಿದೆ. ಕೆ.ಇ.ಬಿ ಒಂದು ಮಂಡಳಿ ಜಿಲ್ಲಾಪರಿಷತ್ ಸರ್ಕಾರ, ಎರಡೂ ಸರ್ಕಾರವೇ, ಆ ಎರಡೂ ಇಲಾಖೆಯವರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆ. ಆದ್ದರಿಂದ ತಾವು ಕಾನೂನಿನಲ್ಲಿ ಸರಳೀಕರಣ ಮಾಡಿ ಆ ಎರಡೂ ಇಲಾಖೆಯವರು ಜಂಟಿಯಾಗಿ ಕೆಲಸ ನಿರ್ವಹಿಸುವಂತೆ ಮಾಡಬೇಕಾಗಿ ವಿನಂತಿಸುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್: ಈ ವಿಚಾರದಲ್ಲೂ ನಾವು ಈಗಾಗಲೇ ನಿರ್ದೇಶನವನ್ನು ಕೊಟ್ಟಿದ್ದೇವೆ. ಪ್ರತಿಯೊಂದು ಜಿಲ್ಲೆಗೆ ಹೋಗಿ ಸಮೀಕ್ಷೆ ಮಾಡಿದಂಥ ಸಂದರ್ಭದಲ್ಲಿ ಕೆ.ಇ.ಬಿ.ಯವರು ಕುಡಿಯುವ ನೀರಿಗೆ ಸಂಪರ್ಕವನ್ನು ಕೊಡುವಲ್ಲಿ ಆದ್ಯತೆಯನ್ನು ಕೊಡಬೇಕೆಂದು ಸೂಚಿಸಿದ್ದೇವೆ. ಇದಲ್ಲದೆ ಮತ್ತೆ ಸಭೆಯನ್ನು ಕರೆದು ಜಿಲ್ಲೆಗಳಲ್ಲಿ ಯಾವ ರೀತಿಯಾದ ತೊಂದರೆಗಳಾಗಿದೆ, ಸಾಮಗ್ರಿಗಳನ್ನು ಒದಗಿಸುವಲ್ಲಿ ಯಾವ ರೀತಿ